ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ–02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಸಂಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ–1/2023–24/ 7947-7951 ದಿನಾಂಕ: 25 JAN 2024

ದಿನಾಂಕ: 27–12–2023 ರಂದು ಬೆಳಿಗ್ಗೆ 11:00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪುರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ವಿಷಯ: ಸ್ಥಾವರ ಸಂಖ್ಯೆ: ILKHT-23 ರ ಅಧಿಕ ಭದ್ರತಾ ಠೇವಣಿ ಮರಳಿಸುವ ಕುರಿತು.

<u>ಪ್ರಕರಣ ಸಂಖ್ಯೆ: 05/2023</u>

M/s Sampat Granites, ಹಿರೇ ಉಪ್ಪನಾಳ ಗ್ರಾಮ,
ತಾಲೂಕ: ಇಲಕಲ್ಲ ರವರ ಪ್ರತಿನಿಧಿ
ಶ್ರೀ ತುಶಾರ್ ಎಮ್. ಬಡ್ಡಿ, ಅರಿಹಂತ ಪಾರ್ಕ್,
ಕೇಶ್ವಾಪುರ, ಹುಬ್ಬಳ್ಳಿ. —— ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ–ವಿಭಾಗ ಹುವಿಸಕಂನಿ.,
ಇಲಕಲ್ಲ. —— ಪ್ರತಿವಾದಿ

ಹಾಜರಿದ್ದವರು: 1) ಶ್ರೀ ಖಲೀಂ ಅಹಮ್ಮದ್, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.

2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ–ವಿಭಾಗ ಹೆಸ್ಕಾಂ, ಇಲಕಲ್ಲ.

3) ಪ್ರಭಾರ ಸಹಾಯಕ ಲೆಕ್ಕಾಧಿಕಾರಿ ಕಾ ಮತ್ತು ಪಾ ಉಪ–ವಿಭಾಗ ಹೆಸ್ಕಾಂ, ಇಲಕಲ್ಲ.

ಗೈರು ಹಾಜರು: 4) M/s Sampat Granites, ಹಿರೇ ಉಪ್ಪನಾಳ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್. ಎಮ್.ಬಡ್ಡಿ, ಅರಿಹಂತ ಪಾರ್ಕ್, ಕೇಶ್ವಪುರ, ಹುಬ್ಬಳ್ಳಿ

ಮ.ತಿ.ನೋ.

ಪ್ರಕರಣ ಸಂಖ್ಯೆ: 05/2023 ಕ್ಕೆ ಸಂಬಂಧಿಸಿದಂತೆ, ದಿನಾಂಕ: 27-12-2023 ರಂದು **ಬೆಳಿಗ್ಗೆ 11:00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ,** ಅಧೀಕ್ಷಕ ಅಭಿಯಂತರರು(ವಿ), ವಿಜಯಪುರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು/ಅಧಿಕಾರಿಗಳನ್ನು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ರವರ ಲಿಖಿತ ಹೇಳಿಕೆ ಪತ್ರ ಸಂಖ್ಯೆ:** 2100-01 **ದಿನಾಂಕ:** 14-09-2023 **ಕಾರ್ಯ ಪಾಲನಾ ಉಪ ವಿಭಾಗ ಹುವಿಸಕಂನಿ., ಇಲಕಲ್ಲ ವ್ಯಾಪ್ತಿಯ ಗ್ರಾಹಕರಾದ M/s Sampat Granites, ಸಾ॥ ಹಿರೇ ಉಪ್ಪನಾಳ ರವರ ಸ್ಥಾವರ ಸಂಖ್ಯೆ: ILKHT-23 ಕ್ಕೆ ವಿದ್ಯುತ್ ಕಡಿಮೆ ಭಾರ ಅಳವಡಿಸಿಕೊಳ್ಳದೇ ಇರುವ ಕುರಿತು ಗ್ರಾಹಕರ ಕುಂದು ಕೊರತೆಯ ಅರ್ಜಿಯಲ್ಲಿ ತಿಳಿಸಿರುವ ಅಂಶಗಳಿಗೆ ಈ ಕೆಳಗಿನಂತೆ ವಿವರಿಸಿರುತ್ತಾರೆ.**

1. **ಸ್ಥಾವರ ಸಂಖ್ಯೆ: ILKHT-23 ಗ್ರಾಹಕರು ದಿನಾಂಕ:** 26-08-2020 **ರಂದು ಇಲಕಲ್ಲ ಉಪ ವಿಭಾಗ ಕಛೇರಿಯ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ವಿದ್ಯುತ್ ಭಾರ ಕಡಿಮೆಗೊಳಿಸಲು ಗ್ರಾಹಕರು ಮೂಲಕ ಅರ್ಜಿ ನೋಂದಣಿ ಮಾಡಿರುತ್ತಾರೆ.**
2. **ಅರ್ಜಿ ನೋಂದಣಿ ಮಾಡಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ (ವಿದ್ಯುತ್ ಭಾರ ಪ್ರಕ್ರಿಯೆ) ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.**
3. **ಸದರಿ ಸ್ಥಾವರಕ್ಕೆ ಎಮ್.ಆರ್.ಟಿ ಪರಿವೀಕ್ಷಣೆ ಆಗದೇ ಇರುವುದರಿಂದ ವಿದ್ಯುತ್ ಭಾರ ಪ್ರಕರಣವು ತಂತ್ರಾಂಶದಲ್ಲಿ ಅಪೂರ್ಣಗೊಂಡ ಕಾರಣ ಪ್ರಕರಣ ಮುಕ್ತಾಯಗೊಂಡಿರುವುದಾಗಿ ಗ್ರಾಹಕರಿಗೆ ತಿಳಿಸಿ, ಪುನಃ ಅರ್ಜಿ ಸಲ್ಲಿಸಲು ತಿಳಿಸಿದಾಗ ಗ್ರಾಹಕರು ದಿನಾಂಕ:** 12-12-2022 **ರಂದು ಪುನಃ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಸದರಿ ಕಡತವು ನಿಗದಿತ ಅವಧಿಯಲ್ಲಿ ಸಲ್ಲಿಕೆಯಾಗದೇ ಇರುವುದರಿಂದ ವಿದ್ಯುತ್ ಭಾರ ಪ್ರಕರಣವು ತಂತ್ರಾಂಶದಲ್ಲಿ ಮುಕ್ತಾಯಗೊಂಡಿರುತ್ತದೆ. ಮುಂದುವರೆದು ಗ್ರಾಹಕರು ಮತ್ತೆ ಪುನಃ ದಿನಾಂಕ:** 14-03-2023 **ರಂದು ಅರ್ಜಿ ಸಲ್ಲಿಸಿದ್ದು, ಆದರೆ ಕಡತವನ್ನು ನಿಗದಿತ ಅವಧಿಯೊಳಗೆ ಸಲ್ಲಿಸದೇ ಇರುವುದರಿಂದ ವಿದ್ಯುತ್ ಭಾರ ಪ್ರಕರಣವು ತಂತ್ರಾಂಶದಲ್ಲಿ ಮುಕ್ತಾಯಗೊಂಡಿರುತ್ತದೆ.**
4. **ದಿನಾಂಕ:** 26-08-2020 **ರಂದು ಮೊದಲನೆಯ ಸಾರಿ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಅಪೂರ್ಣಗೊಂಡ ಅರ್ಜಿ ಪ್ರಕ್ರಿಯೆಯಲ್ಲಿ ಅಧಿಕೃತ ಜ್ಞಾಪನಾ ಪತ್ರ ಜನರೇಟ್ ಆಗಿದ್ದು, ಅದರಲ್ಲಿ ಮ್ಯಾನುವಲ್ ಆಗಿ ಕಡಿಮೆ ವಿದ್ಯುತ್ ಭಾರವನ್ನು ನಮೂದಿಸಿ ಸಹಿ ಮಾಡಿರುವ ಪ್ರಕ್ರಿಯೆ ಆಗಿರುವ ಕಾರಣ ತಂತ್ರಾಂಶದಲ್ಲಿ ವಿದ್ಯುತ್ ಭಾರ ಕಡಿಮೆ ಆಗಿರುವುದಿಲ್ಲ.**

5. ಆದಾಗ್ಯೂ ಸದರಿ ಪ್ರಕರಣದ ಕಡತವು ಮ್ಯಾನುವಲ್ ಪ್ರಕ್ರಿಯೆ ಆಗಿರುತ್ತದೆ. ಕಾರಣ ವಿದ್ಯುತ್ ಭಾರದ ಪ್ರಕರಣವು ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ವಿದ್ಯುತ್ ಭಾರ ಕಡಿಮೆ ಆಗಿರುವುದಿಲ್ಲ ಎಂದು ತಿಳಿಸಿರುವರು.

ಕಾರಣ M/s Sampat Granites, ಹಿರೇ ಉಪ್ಪನಾಳ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್ ಎಮ್. ಬಢ್ಡಿ, ಅರಿಹಂತ ಪಾರ್ಕ್, ಕೇಶ್ವಾಪುರ, ಹುಬ್ಬಳ್ಳಿ ಇವರು ಗೈರು ಹಾಜರಾಗಿರುವ ಪ್ರಯುಕ್ತ ಸಭೆಯಲ್ಲಿ ಪ್ರಕರಣದ ಪರ ಮತ್ತು ವಿರೋಧ ಮಾಹಿತಿಯನ್ನು ಚರ್ಚಿಸಲಾಗಲಿಲ್ಲ ಕಾರಣ ಸದರಿ ಪ್ರಕರಣ ಮುಂದೂಡಲಾಯಿತು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ ಇಲಕಲ್ಲ ರವರಿಗೆ ಮುಂದಿನ ದಿನಾಂಕದಂದು ಮಾಹಿತಿಯನ್ನು ಮಂಡಿಸಲು ಸೂಚಿಸಲಾಯಿತು.

ಶ್ರೀ ಬಶೀರ ಅಹಮ್ಮದ್,
ಕಾರ್ಯನಿರ್ವಾಹಕ ಇಂಜನೀಯರ(ವಿ),
ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆ, ಬಾಗಲಕೋಟ.

24.1.24
ಅಧ್ಯಕ್ಷರು,
(ಶ್ರೀ, ಸಿದ್ದಪ್ಪ. ಬಿಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪುರ ಹಾಗೂ,
ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ.

**ಪ್ರತಿಯನ್ನು ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:**

ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ.

ಪ್ರತಿ ಅಭಿವಂದನೆಗಳೊಂದಿಗೆ:

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.

ಪ್ರತಿಗಳು ಮಾಹಿತಿಗಾಗಿ:

1) ಕಾರ್ಯ ನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ–ವಿಭಾಗ ಹೆಸ್ಕಾಂ, ಇಲಕಲ್ಲ.
3) M/s Sampat Granites, ಹಿರೇ ಉಪ್ಪನಾಳ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್ ಎಮ್. ಬಢ್ಡಿ, ಅರಿಹಂತ ಪಾರ್ಕ್, ಕೇಶ್ವಾಪುರ, ಹುಬ್ಬಳ್ಳಿ.

ಕಛೇರಿ ಪ್ರತಿ/ಪ್ರಧಾನ ಕಡತ.